**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬೆಂಗಳೂರು ಡೇರಿ ಪ್ರಾಂಗಣ, ಡಾ|| ಎಂ.ಹೆಚ್.ಮರೀಗೌಡ ರಸ್ತೆ, ಡಿ.ಆರ್.ಕಾಲೇಜ್ ಅಂಚೆ, ಬೆಂಗಳೂರು-560029.**

**ದೂರವಾಣಿ :080-26096210**

**ಸಂಖ್ಯೆ:ಬಮೂಲ್/ಆಡಳಿತ-1/ಬ್ಯಾಕ್‌ಲಾಗ್/2024-25/814** **ದಿನಾಂಕ:20.12.2024**

**ಬ್ಯಾಕ್‌ಲಾಗ್ ನೇಮಕಾತಿ ಪ್ರಕಟಣೆ**

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಬ್ಯಾಕ್‌ಲಾಗ್ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:-

| ಕ್ರಮ ಸಂಖ್ಯೆ | ಹುದ್ದೆಯ ವಿವರ | ವೇತನ ಶ್ರೇಣಿ ರೂ. | ಹುದ್ದೆಗಳ ಸಂಖ್ಯೆ | ಮೀಸಲಾತಿ | | ವಿದ್ಯಾರ್ಹತೆ |
|---|---|---|---|---|---|---|
| | | | | ಪ.ಜಾ | ಪ.ಪಂ | |
| 1. | ಸಹಾಯಕ ವ್ಯವಸ್ಥಾಪಕರು(ಪ.ವೈ/ಕೃ.ಗ) | 52650-97100 | 03 | ಅಂ.ವಿ-1<br>ಗ್ರಾ-1<br>ಮ-1 | | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಬಿ.ವಿ.ಎಸ್.ಸಿ/ಬಿ.ವಿ.ಎಸ್.ಸಿ &ಎ.ಹೆಚ್ ಪದವಿಯನ್ನು ಪಡೆದಿರಬೇಕು |

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳನ್ನು ಈ ರೀತಿ ಅರ್ಥೈಸಿಕೊಳ್ಳಬೇಕು:- ಮ-ಮಹಿಳಾ ಅಭ್ಯರ್ಥಿ, ಗ್ರಾ-ಗ್ರಾಮೀಣ ಅಭ್ಯರ್ಥಿ ಅಂ.ವಿ-ಅಂಗವಿಕಲ.

1) ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 18 ವರ್ಷ ತುಂಬಿರಬೇಕು ಮತ್ತು 40 ವರ್ಷಗಳಿಗೆ ಮೀರಿರಬಾರದು.
2) ಕನ್ನಡ ಓದಲು, ಬರೆಯಲು ಮತ್ತು ಮಾತನಾಡಲು ಅರಿವು ಇರಬೇಕು.
3) ಎಸ್.ಎಸ್.ಎಲ್.ಸಿ ಅಥವಾ ಇದಕ್ಕೆ ತತ್ಸಮವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಐಚ್ಛಿಕ ವಿಷಯವಾಗಿ ಕಡ್ಡಾಯವಾಗಿ ವ್ಯಾಸಾಂಗ ಮಾಡಿರಬೇಕು.
4) ಅಭ್ಯರ್ಥಿಯು ಭಾರತೀಯ ನಾಗರಿಕನಾಗಿರತಕ್ಕದ್ದು.
5) ಅರ್ಹ ಮಹಿಳಾ ಮತ್ತು ಗ್ರಾಮೀಣ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅದೇ ವರ್ಗದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

1. **ಶೈಕ್ಷಣಿಕ ವಿದ್ಯಾರ್ಹತೆ:**

ಅರ್ಜಿಗಳನ್ನು ಸಲ್ಲಿಸಲ್ಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಹುದ್ದೆಗೆ ಸೂಚಿಸಿರುವ ವಿದ್ಯಾರ್ಹತೆಯ ಪದವಿ (10+2+5) ಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು.ಅಭ್ಯರ್ಥಿಗಳು ಅರ್ಜಿಯೊಂದಿಗೆ ಉತ್ತೀರ್ಣರಾಗಿರುವ ಎಲ್ಲಾ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಯನ್ನು ಲಗತ್ತಿಸಬೇಕು.

- ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ನೀಡುವ ಪಶುವೈದ್ಯಕೀಯ ಪ್ರಮಾಣ ಪತ್ರ.
- Transcript Certificate.
- Provisional Degree Certificate
- Karnataka Veterinary Council(Registration Certificate)
- ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ಜನ್ಮ ದಿನಾಂಕವನ್ನು ತೋರಿಸುವ Cumulative Record.
- ಕಂಪ್ಯೂಟರ್ ನಿರ್ವಹಣೆಯಲ್ಲಿ ಸಂಪೂರ್ಣ ಜ್ಞಾನ ಹೊಂದಿರುವ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು

**2. ಮೀಸಲಾತಿ:**

ತಹಶೀಲ್ದಾರ್ ರವರಿಂದ ಪಡೆದಿರುವ ಪರಿಶಿಷ್ಟ ಜಾತಿ ಮೀಸಲಾತಿ ಹೊಂದಿರುವ ನಮೂನೆ-ಡಿ ಪ್ರಮಾಣ ಪತ್ರ

**3. ಗ್ರಾಮೀಣ :**

ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-2ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದಲ್ಲಿ ಮಾತ್ರ ಮೀಸಲಾತಿ ಪಡೆಯಲು ಅರ್ಹರು. ಸದರಿ ಅಭ್ಯರ್ಥಿಗಳು ನಮೂನೆ-2 ರಲ್ಲಿ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

**4. ಅಂಗವಿಕಲ ಅಭ್ಯರ್ಥಿ :**

ಅಂಗವಿಕಲ ಮೀಸಲಾತಿ ಅಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಸಕ್ಷಮ ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣ ಪತ್ರ/ಇಲಾಖೆಯಿಂದ ನೀಡಿರುವ ಅಂಗವಿಕಲ ಕಾರ್ಡ್‌ನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

**ಅರ್ಜಿ ಸಲ್ಲಿಸುವ ವಿಧಾನ:**

ಅರ್ಜಿಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಒಕ್ಕೂಟದ ವೆಬ್‌ಸೈಟ್ www.bamulnandini.coop ನಲ್ಲಿ ಸೂಚಿಸಿರುವ ಅರ್ಜಿ ನಮೂನೆಯೊಂದಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಮೀಸಲಾತಿ ದಾಖಲೆಗಳ (ಜೆರಾಕ್ಸ್ ಪ್ರತಿ) ಮತ್ತು ವೈಯಕ್ತಿಕ ಮಾಹಿತಿಯೊಂದಿಗೆ "ವ್ಯವಸ್ಥಾಪಕ ನಿರ್ದೇಶಕರು, **ಬೆಂಗಳೂರು ನಗರ,ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬೆಂಗಳೂರು ಡೇರಿ ಪ್ರಾಂಗಣ,ಡಾ|| ಎಂ.ಹೆಚ್.ಮರೀಗೌಡ ರಸ್ತೆ, ಡಿ.ಆರ್.ಕಾಲೇಜ್ ಅಂಚೆ,ಬೆಂಗಳೂರು-560029"** ಈ ವಿಳಾಸಕ್ಕೆ ತಲುಪುವಂತೆ ಕಳುಹಿಸತಕ್ಕದ್ದು.

- ಅಭ್ಯರ್ಥಿಗಳು ಅವಶ್ಯವಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು ಸಲ್ಲಿಸಬೇಕು.
- ಅರ್ಜಿಯೊಂದಿಗೆ ಇತ್ತೀಚಿನ 02(ಎರಡು) ಭಾವಚಿತ್ರಗಳನ್ನು ಲಗತ್ತಿಸಿರಬೇಕು.
- ಅರ್ಜಿಯೊಂದಿಗೆ ರೂ.500/- ಮೌಲ್ಯದ ಮೂಲ ಡಿ.ಡಿ. ಯನ್ನು "ವ್ಯವಸ್ಥಾಪಕ ನಿರ್ದೇಶಕರು, ಬಮೂಲ್, ಬೆಂಗಳೂರು" ಇವರಿಗೆ ಸಂದಾಯವಾಗುವಂತೆ ಪಡೆದು, ಸಲ್ಲಿಸುವ ಅರ್ಜಿ ಲಕೋಟೆ ಮೇಲೆ ಹುದ್ದೆಯ ವಿವರ ಸ್ಪಷ್ಟವಾಗಿ ನಮೂದಿಸಿ **ದಿನಾಂಕ: 19.01.2025 ರ ಸಂಜೆ.5.30** ರ ಒಳಗೆ ಬೆಂಗಳೂರು ಸಹಕಾರ ಹಾಲು ಒಕ್ಕೂಟಕ್ಕೆ ತಲುಪಿಸಬೇಕು, ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

**ಸೂಚನೆಗಳು :**

ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದಂತೆ ಕೋರಿರುವ ವಿದ್ಯಾರ್ಹತೆ, ಮೀಸಲಾತಿ ಹಾಗೂ ಇತರೆ ಎಲ್ಲಾ ಅವಶ್ಯಕ ದಾಖಲೆಗಳನ್ನು ಸರ್ಕಾರಿ ಗೆಜೆಟಡ್ ಅಧಿಕಾರಿಗಳಿಂದ ದೃಢೀಕರಿಸಿದ ಪ್ರತಿ ಹಾಗೂ ಮೂಲ ಡಿ.ಡಿ ಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.ಅಸ್ಪಷ್ಟ ಅಪೂರ್ಣ,ಭಾವಚಿತ್ರ ಇಲ್ಲದ ಮತ್ತು ಅಭ್ಯರ್ಥಿಯು ಸಹಿ ಮಾಡದೆ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಪರೀಕ್ಷಾರ್ಥ ಅವಧಿ ನೌಕರ:**

ಖಾಯಂ ಹುದ್ದೆಗೆ ನೇಮಕ (Recruitment) ಮಾಡಿಕೊಳ್ಳುವ ಸಲುವಾಗಿ ಒಟ್ಟು ಎರಡು ವರ್ಷದ ಅವಧಿಗೆ ಮೀರದಂತೆ ಪರೀಕ್ಷಾವಧಿಗೆ ಹಂಗಾಮಿಯಾಗಿ ನೇಮಕಗೊಂಡಿದ್ದು ಪರೀಕ್ಷಾರ್ಥ ನೌಕರರ ಹಾಜರಾತಿ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ವ್ಯಕ್ತಿ. ಪರೀಕ್ಷಾವಧಿ ಮುಗಿದಿದ್ದರೂ ಆಡಳಿತವರ್ಗವು ಲಿಖಿತವಾಗಿ ಸೇವೆಯನ್ನು ಖಾಯಂಗೊಳಿಸಿದೆ ಎಂದು ಖಚಿತಪಡಿಸದ ಹೊರತು ಪರೀಕ್ಷಾರ್ಥಿಯನ್ನು ಖಾಯಂ ನೌಕರನೆಂದು ಪರಿಗಣಿಸಲಾಗುವುದಿಲ್ಲ.

**<u>ದುರ್ನಡತೆ :</u>**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಮಾಲೋಚನೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತರುವನೆಂದು ಅಥವಾ ಅವರ ನೇಮಕಾತಿ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಇಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ಅಥವಾ ನೇಮಕಾತಿಯ ನಂತರವೂ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

**<u>ಆಯ್ಕೆ ವಿಧಾನ:</u>**

ಈ ಹುದ್ದೆಗಳಿಗೆ ಆಯ್ಕೆಯನ್ನು ಕರ್ನಾಟಕ ಸರ್ಕಾರದ ನೋಟಿಫಿಕೇಶನ್ ಸಂಖ್ಯೆ:ಡಿ ಪಿ ಎಆರ್/13/ ಎಸ್ ಬಿ ಸಿ /2001 ದಿನಾಂಕ:21.11.2001ರ ನಿಯಮಾವಳಿಯಂತೆ ಮಾಡಲಾಗುವುದು.

**ಸಹಿ/- ವ್ಯವಸ್ಥಾಪಕ ನಿರ್ದೇಶಕರು**
**ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.,**

ಬೆಂಗಳೂರು ಸಹಕಾರಿ ಹಾಲು ಒಕ್ಕೂಟ ನಿ., ಬೆಂಗಳೂರು-29

## ಅರ್ಜಿ ನಮೂನೆ

ಪ್ರಕಟಣೆ ಸಂಖ್ಯೆ:ಬಮೂಲ್/ಆಡಳಿತ-1/ಬ್ಯಾಕ್‌ಲಾಗ್/2024-25/814 ದಿನಾಂಕ:20.12.2024

ಹುದ್ದೆಯ ಹೆಸರು: .......................................................

ವೇತನ ಶ್ರೇಣಿ :

| | |
|---|---|
| 1. ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2. ತಂದೆಯ/ಗಂಡನ ಹೆಸರು | |
| 3. ಜನ್ಮದಿನಾಂಕ, ವಯಸ್ಸು (ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಇದ್ದಂತೆ) | |
| 4. ರಾಷ್ಟ್ರೀಯತೆ ಹಾಗೂ ಜನ್ಮಸ್ಥಳ | |
| 5. ಎ)ಜಾತಿ/ಉಪಜಾತಿ/ಪ್ರವರ್ಗ | |
| ಬಿ)ಸರ್ಕಾರಿ ಮೀಸಲಾತಿ ನಿಯಮಗಳನ್ವಯ ಅಗತ್ಯ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸತಕ್ಕದ್ದು | ಪರಿಶಿಷ್ಟ ಜಾತಿ<br>ಅಂಗವಿಕಲ<br>ಗ್ರಾಮೀಣ |
| 6. ಲಿಂಗ | |
| 7. ಪೂರ್ಣ ವಿಳಾಸ (ಪತ್ರ ವ್ಯವಹಾರಕ್ಕಾಗಿ) | |

8. ವಿದ್ಯಾರ್ಹತೆ (ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮಾತ್ರ ನಮೂದಿಸುವುದು) ಅಭ್ಯರ್ಥಿಯು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ/ವರ್ಷಗಳ ಅಂಕಪಟ್ಟಿಯ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. ಅಪೂರ್ಣ ಮಾಹಿತಿ/ಅಗತ್ಯ ಅಂಕಪಟ್ಟಿಗಳಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

| ಸಾಮಾನ್ಯ ವಿದ್ಯಾರ್ಹತೆ | ವಿಶ್ವವಿದ್ಯಾನಿಲಯ/ ಮಂಡಳಿಯ ಹೆಸರು | ಒಟ್ಟು ಅಂಕಗಳು | ಗಳಿಸಿದ ಅಂಕಗಳು | ಶೇಕಡವಾರು ಅಂಕಗಳು |
|---|---|---|---|---|
| ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ | | | | |
| ಪಿ.ಯು.ಸಿ.ಅಥವಾ ತತ್ಸಮಾನ | | | | |
| ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದ ಬಿ.ವಿ.ಎಸ್.ಸಿ/ಬಿ.ವಿ.ಎಸ್.ಸಿ &ಎ.ಹೆಚ್ ಪದವಿಯನ್ನು | | | | |
| | | | | |
| | | | | |
| | | | | |
| | | | | |

| | |
|---|---|
| 9.ಪ್ರಸ್ತುತ ಸೇವೆಯಲ್ಲಿದ್ದರೆ ಅಭ್ಯರ್ಥಿಯು ಸದರಿ ಸಂಸ್ಥೆಯ ಹೆಸರು ಮತ್ತು ವಿಳಾಸ ನಿರಾಕ್ಷೇಪಣ ಪತ್ರ | |
| 10.ಗಣಕಯಂತ್ರದ ನಿರ್ವಹಣೆಯ ಅರಿವಿನ ಬಗ್ಗೆ ದಾಖಲಾತಿಗಳನ್ನು ಲಗತ್ತಿಸುವುದು. | |
| 11.ಲಗತ್ತಿಸಿದ ಡಿ.ಡಿ/ಪೋಸ್ಟಲ್ ಆರ್ಡರ್ ವಿವರಗಳು | ಡಿ.ಡಿ/ಪೋಸ್ಟಲ್ ಆರ್ಡರ್ ಸಂಖ್ಯೆ :-<br>ದಿನಾಂಕ:-<br>ಡಿ.ಡಿ/ಪೋಸ್ಟಲ್ ಆರ್ಡರ್ ಮೊತ್ತ ರೂ._____<br>ಖರೀದಿಸಿದ ಬ್ಯಾಂಕ್/ಪೋಸ್ಟ್ ಆಫೀಸ್ ಹೆಸರು ಮತ್ತು ಶಾಖೆ:- |
| 12.ಹುದ್ದೆಗೆ ಸಂಬಂಧಪಟ್ಟಂತೆ ಅಭ್ಯರ್ಥಿಯು ನೀಡುವ ಇತರೆ ಯಾವುದೇ ಮಾಹಿತಿಗಳು (ಇದ್ದಲ್ಲಿ ನೀಡುವುದು) | |

**ಘೋಷಣೆ:** ಈ ಅರ್ಜಿಯಲ್ಲಿ ನೀಡಿರುವ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಈ ಮೂಲಕ ದೃಢಿಕರಿಸಿದೆ. ನಾನು ಸಲ್ಲಿಸಿರುವ ಮಾಹಿತಿಯು ಯಾವುದೇ ಹಂತದಲ್ಲಿ ಈ ಬಗ್ಗೆ ಯಾವುದೇ ವಾಸ್ತವಾಂಶ ಮುಚ್ಚಿಡಲು ಪ್ರಯತ್ನಿಸಿದ್ದೇನೆಂದು ಕಂಡುಬಂದಲ್ಲಿ ನನ್ನ ಅಭ್ಯರ್ಥಿತನವನ್ನು ತಕ್ಷಣ ನಿರಾಕರಿಸಬಹುದು ಅಥವಾ ಸೇವಯಾಲ್ಲಿದಾಗ ನನ್ನ ಸೇವೆಯನ್ನು ತಕ್ಷಣ ಮುಕ್ತಾಯಗೊಳಿಸಿ ನನ್ನ ಮೇಲೆ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ದಿನಾಂಕ:

ಸ್ಥಳ : ಅಭ್ಯರ್ಥಿಯ ಸಹಿ ಮತ್ತು ಹೆಸರು